ಪ್ರಜಾವಾಣಿ

# ಬ್ಯಾಡ್ಮಿಂಟನ್: ಜೈನ್ ವಿ.ವಿ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ಮಹಿಳೆಯರ ತಂಡ ಇತ್ತೀಚೆಗೆ ವಿಶಾಖಪಟ್ಟಣದಲ್ಲಿ ನಡೆದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ.

ಫೈನಲ್‌ನಲ್ಲಿ ಜೈನ್ ವಿಶ್ವವಿದ್ಯಾಲಯದ ಆಟಗಾರ್ತಿಯರು 2-0ರಲ್ಲಿ ಆಂಧ್ರ ವಿಶ್ವವಿದ್ಯಾಲಯ ತಂಡವನ್ನು ಮಣಿಸಿದರು.

ಮೊದಲ ಸಿಂಗಲ್ಸ್ ವಿಭಾಗದ ಪಂದ್ಯ ಆಡಿದ ಜೈನ್ ವಿ.ವಿ ತಂಡದ ಅಪೇಕ್ಷಾ ನಾಯಕ್ 21-14, 21-12ರಲ್ಲಿ ಆಂಧ್ರ ವಿ.ವಿಯ ಲಕ್ಷ್ಮಿ ವಿರುದ್ಧ ಗೆದ್ದರು.

ಡಬಲ್ಸ್ ಪಂದ್ಯದಲ್ಲಿ ಜೈನ್ ತಂಡದ ರೇಷ್ಮಾ ಕಾರ್ತಿಕ್ ಹಾಗೂ ಸಾಕ್ಷಿ ಗೌತಮ್ ಜೋಡಿ 21-17, 21-16ರಲ್ಲಿ ಲಕ್ಷ್ಮಿ ಹಾಗೂ ದಿವ್ಯಾ ಅವರನ್ನು ಮಣಿಸಿತು.




ಪ್ರಶಸ್ತಿಯೊಂದಿಗೆ ಜೈನ್ ವಿಶ್ವವಿದ್ಯಾಲಯ ಬ್ಯಾಡ್ಮಿಂಟನ್ ತಂಡ (ನಿಂತವರು, ಎಡದಿಂದ); ವಿಧು ನಾಯರ್, ಅಪೇಕ್ಷಾ ನಾಯಕ್, ಶಿಖಾ ಗೌತಮ್ (ಕುಳಿತವರು); ರೇಷ್ಮಾ ಕಾರ್ತಿಕ್, ಡಾ. ಚೆನ್‌ರಾಜ್ ರಾಯ್‌ಚಂದ್ (ಜೈನ್ ವಿ.ವಿ ಟ್ರಸ್ಟ್ ಅಧ್ಯಕ್ಷರು), ಡಾ. ಶಂಕರ್ (ಕ್ರೀಡಾ ನಿರ್ದೇಶಕರು), ಪ್ರದೀಪ್ ಕುಮಾರ್ (ಕ್ರೀಡಾ ಸಹ ನಿರ್ದೇಶಕರು).